ಅಧ್ಯಕ್ಷರು : ತಾವು ವಿರೋಧಪಕ್ಷದವರು ಕುಳಿತುಕೊಳ್ಳಿ, ಹೇಳುತ್ತೇನೆ ನಾನು, ತಾವು ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ತಮ್ಮ ಸ್ಥಳಗಳಿಗೆ ಹೋಗಬೇಕು ಎಂದು ನಾನು ಪುನಃ ಪುನಃ ಕೇಳಿಕೊಳ್ಳುತ್ತೇನೆ. ತಾವು ಇದೇ ರೀತಿ ಮುಂದುವರೆದರೆ ನನಗೆ ಇಲ್ಲಿ ಸದನವನ್ನು ನಡೆಸಲು ಕಷ್ಟವಾಗುತ್ತದೆ. ಆದ್ದರಿಂದ ಪುನಃ ಪುನಃ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಆದರೂ ಅವರು ಅವರ ಸ್ಥಳಗಳಿಗೆ ಹೋಗದೆ ಕೂಗಾಟ ಮತ್ತು ಗೊಂದಲವನ್ನು ಹೆಚ್ಚು ಮಾಡಿದರು)

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಬೇಕೆಂದು ಸೂಚಿಸುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ : ಅಧ್ಯಕ್ಷರೇ, ವಿರೋಧಪಕ್ಷದವರು ಮಂಡಿಸಿರುವ ಅವಿಶ್ವಾಸ ನಿರ್ಣಯದಲ್ಲಿ ಯಾವ ಸತ್ವವೂ ಇಲ್ಲ, ಆದ್ದರಿಂದ ಅದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ.

(ಹಲವಾರು ಕಾಂಗ್ರೆಸ್ ಸದಸ್ಯರು ಸದನದ ವೆಲ್‌ನಲ್ಲಿ ನಿಂತು ನ್ಯಾಯಬೇಕು, ನ್ಯಾಯಬೇಕು ಎಂದದು ಘೋಷಣೆ ಕೂಗುತ್ತಿದ್ದರು)

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್.ವಿ. ದೇಶಪಾಂಡೆಯವರು, ಬಿ.ಎಸ್.ಯಡಿಯೂರಪ್ಪನವರು, ಮತ್ತಿತರ ವಿರೋಧ ಪಕ್ಷದ ಸದಸ್ಯರು ಎದ್ದು ನಿಂತು ಕೂಗುತ್ತಾ ಸಭಾತ್ಯಾಗ ಮಾಡಿದರು. ಮತ್ತೆ ಸದನಕ್ಕೆ ವಾಪಸ್ ಬಂದರು)

ಅಧ್ಯಕ್ಷರು : ಈಗ ಅವಿಶ್ವಾಸ ನಿರ್ಣಯದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ

"ಈ ಸದನ ಶ್ರೀ ಎಂ. ವೀರಪ್ಪಮೊಯಿಲಿ ಅವರ ಸಚಿವ ಸಂಪುಟದಲ್ಲಿ ಅವಿಶ್ವಾಸ"ವನ್ನು ವ್ಯಕ್ತಮಾಡುತ್ತದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

(ಪ್ರಸ್ತಾವ ಬಿದ್ದು ಹೋಯಿತು ಮತ್ತು ತಿರಸ್ಕರಿಸಲ್ಪಟ್ಟಿತು)

ಅಧ್ಯಕ್ಷರು : ಸಭೆಯನ್ನು ಈಗ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.)

(4-31ಕ್ಕೆ ಸಭೆಯನ್ನು ಅನಿರ್ದಿಷ್ಟಕಾಲ ಮುಂದಕ್ಕೆ ಹಾಕಲಾಯಿತು.)